# ಮತ್ತೊಮ್ಮೆ ಮಂಗಟ್ಟೆ

**ಮಂಗಟ್ಟೆಗಳು ಪರಿಸರಚಕ್ರದ ವಿಶಿಷ್ಟ ಕೊಂಡಿಗಳು. ಮಳೆಕಾಡುಗಳ ಉಳಿವಿಗೂ ಮಂಗಟ್ಟೆಗಳ ಅಸ್ತಿತ್ವಕ್ಕೂ ಸಂಬಂಧವಿದೆ. ಮನುಷ್ಯರ ಕೌಟುಂಬಿಕ ಮೌಲ್ಯಗಳನ್ನು ಮಂಗಟ್ಟೆಗಳ ಕುಟುಂಬದಲ್ಲೂ ಕಾಣಬಹುದು.**

■ ಸುಮಂಗಲಾ ಎಸ್. ಮುಮ್ಮಿಗಟ್ಟಿ



ಅದು ಇಳಿ ಸಂಜೆಯ ಹೊತ್ತು. ದಾಂಡೇಲಿಯ ರಾಷ್ಟ್ರೀಯ ಉದ್ಯಾನವನದ ತುಸು ದೂರದಲ್ಲಿ ರಸ್ತೆಯ ತಿರುವೊಂದರಲ್ಲಿ ಇದ್ದಕ್ಕಿದ್ದಂತೆ ಆಗಸದಲ್ಲಿ ಏನೋ ಕಂಡಂತಾಗಿ ಕಾರು ನಿಲ್ಲಿಸಿದೆವು. ಕತ್ತೆತ್ತಿ ನೋಡಿದಾಗ ಬಾನಲ್ಲಿ ಬೆಡಗಿನ ಚಿತ್ತಾರ! ಕಪ್ಪು, ಬಿಳಿ, ಹಳದಿ ಬಣ್ಣದ ವರ್ಣಗಳು ಕಂತುತ್ತಿದ್ದ ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತಿದ್ದವು. ಈ ಬಾನಾಡಿಗಳು ರೆಕ್ಕೆ ಬಡಿಯದೆಯೇ ನಿಧಾನವಾಗಿ ತೇಲುತ್ತಾ ನಮ್ಮ ಬಲ ಬದಿಯ ಕಣಿವೆಯ ಕಾಡಿನಲ್ಲಿ ಇಳಿಯುತ್ತಿದ್ದವು. ಅಷ್ಟು ಎತ್ತರದಿಂದಲೇ ಅವುಗಳ ರೆಕ್ಕೆಗಳ ವಿಶಾಲತೆಯ ಅರಿವಾಗುವಷ್ಟು ದೊಡ್ಡವಿದ್ದವು. ಅವುಗಳನ್ನು ಮತ್ತಷ್ಟು ಹೊತ್ತು ನೋಡಬೇಕೆಂದುಕೊಂಡರೂ, ಕಾರು ನಿಲ್ಲಿಸಿದ್ದು ರಸ್ತೆಯ ತಿರುವಿನಲ್ಲಾದ್ದರಿಂದ ಹೆಚ್ಚು ಹೊತ್ತು ನಿಲ್ಲಲು ಅವಕಾಶವಿರಲಿಲ್ಲ.

ಮಳೆಕಾಡು ಹಕ್ಕಿ, ಮಂಗಟ್ಟೆ, ಓಂಗಿಲೆ ಎಂದೆಲ್ಲ ಕರೆಯುವ ಇವನ್ನು ಇಂಗ್ಲಿಷಿನಲ್ಲಿ 'ಹಾರ್ನ್ ಬಿಲ್' ಎಂದು ಕರೆಯುತ್ತಾರೆ. ಅವುಗಳಲ್ಲಿ ನಾವು ನೋಡಿದ್ದು 'ಗ್ರೇಟ್ ಇಂಡಿಯನ್ ಹಾರ್ನ್ ಬಿಲ್' ಅಥವಾ 'ಗ್ರೇಟ್ ಹಾರ್ನ್ ಬಿಲ್' ಅಥವಾ 'ಪೈಡ ಹಾರ್ನ್ ಬಿಲ್' ಎಂದು ಕರೆಯುವ, ಭಾರತ, ನೇಪಾಳ, ಭೂತಾನ್, ಮ್ಯಾನ್ಮಾರ್, ದಕ್ಷಿಣ ಚೀನಾ, ವಿಯಟ್ನಾಂ, ಲಾವೋಸ್, ಥಾಯ್ಲೆಂಡ್, ಸುಮಾತ್ರಾ ಮತ್ತು ಇಂಡೋನೇಷ್ಯಾಗಳಲ್ಲಿ ಕಂಡುಬರುತ್ತವೆ. ಸಾಮಾನ್ಯವಾಗಿ ಸದಾ ಹಸಿರಿನ ಮಳೆ ಕಾಡು ಮತ್ತು ತೇವ ಭರಿತ ಎಲೆ ಉದುರಿಸುವ ಕಾಡುಗಳಲ್ಲಿ ಇವು ವಾಸಿಸುತ್ತವೆ.

## ಮಂಗಟ್ಟೆಗಳ ಮೋಹಕ ರೂಪ

ಮಂಗಟ್ಟೆಗಳನ್ನು ಮತ್ತೆ ನಾವು ಹತ್ತಿರದಿಂದ ನೋಡಿದ್ದು ಕುದುರೆಮುಖ ರಾಷ್ಟ್ರೀಯ